ಗಳಿಂದ ೪೨ ಕೋಟಿ ರೂಪಾಯಿ ಬಾಕಿ ಬರಬೇಕಾಗಿದೆ. ಇವರಲ್ಲಿ ಯಾರಾದರೂ ಒಬ್ಬರ ಮನೆಗೆ ನುಗ್ಗಿ ಪಾತ್ರೆ, ಹಂಡೆ, ಜಪ್ತಿ ಮಾಡಿದ್ದೀರಾ ? ನಿಮ್ಮ ಇಬ್ಬಂದಿ ನೀತಿ ಬಗ್ಗೆ ನೀವು ಇಬ್ಬಂದಿಗಳಲ್ಲ ಎನ್ನುವುದನ್ನು ದಯವಮಾಡಿ ತಾವು ಸದನಕ್ಕೆ ಹೇಳಬೇಕು.

ಶ್ರೀ ಎಸ್. ಎಂ. ಯಾಹ್ಯ.—ಸರ್ಕಾರಕ್ಕೆ ಯಾವ ಹಣ ಬರಬೇಕೋ, ಯಾವ ಕಡೆಯಿಂದ ಬರಬೇಕೋ ಅದನ್ನು ತೆಗೆದುಕೊಳ್ಳಬೇಕೆಂಬುದು ಸರ್ಕಾರದ ನೀತಿ ಇದೆ. ಯಾರಿಗೂ ನಾವು ವೇವ್ ಮಾಡಿಲ್ಲ. ಹಾಗೂ ವೇವ್ ಮಾಡುವುದೂ ಇಲ್ಲ. ಅದನ್ನು ತೆಗೆದುಕೊಳ್ಳುವಾಗ ನಾವು ಕಾನೂನು ಪ್ರಕಾರ ತೆಗೆದುಕೊಳ್ಳಬೇಕಾಗುತ್ತದೆ. ಕಾನೂನು ಪ್ರಕಾರ ತೆಗೆದುಕೊಳ್ಳುವ ಬಗ್ಗೆ ನಾವು ಎಲ್ಲಾ ರೀತಿಯ ಕಾರ್ಯಕ್ರಮಗಳನ್ನೂ ಕೈಗೊಳ್ಳುತ್ತಿದ್ದೇವೆ.

ರಾಯಚೂರಿನಲ್ಲಿರುವ ಶಾಖೋತ್ಪನ್ನ ವಿದ್ಯುತ್ ಸ್ಥಾವರ

೫೮೯. ಶ್ರೀ ಜಿ. ರಾಜುಗೌಡ (ಹನೂರು).—ಮಾನ್ಯ ಕೈಗಾರಿಕೆ, ಇಂಧನ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಯಚೂರಿನ ಶಾಖೋತ್ಪನ್ನ ವಿದ್ಯುತ್ ಸ್ಥಾವರ ಒಂದು ದಿನಕ್ಕೆ ಎಷ್ಟು ಉತ್ಪಾನಾ ಸಾಮರ್ಥ್ಯ ಹೊಂದಿದೆ ?

ಆ) ಒಂದು ಯೂನಿಟ್ ಉತ್ಪಾದನಾ ವೆಚ್ಚವೆಷ್ಟು ?

ಇ) ಈ ಉತ್ಪಾದನೆ ಇತ್ತೀಚಿನ ದಿನಗಳಲ್ಲಿ ಕುಂಠಿತವಾಗಿರಲು ಮುಖ್ಯ ಕಾರಣಗಳೇನು ?

ಈ) ಇದರಿಂದ ವಿದ್ಯುತ್ ನಿಗಮಕ್ಕೆ ಎಷ್ಟು ನಷ್ಟವಾಗಿದೆ ?

ಉ) ಇದರಿಂದ ಬಳಕೆದಾರರ ಮೇಲೆ ಆಗಿರುವ ಪರಿಣಾಮವೇನು ?

ಶ್ರೀ ಎಸ್. ಎಂ. ಯಾಹ್ಯ (ಕೈಗಾರಿಕೆ ಇಂಧನ ಮತ್ತು ವಕ್ಫ್ ಸಚಿವರು).—

ಅ) ಈ ಸ್ಥಾವರದಲ್ಲಿ ೨೧೦ ಮೆಗವ್ಯಾಟ್ ಸಾಮರ್ಥ್ಯದ ಎರಡು ಘಟಕಗಳಿರುತ್ತವೆ. ಪ್ರತಿ ಘಟಕವು ದಿನವೊಂದಕ್ಕೆ ೫.೦ಳಿ ಮಿಲಿಯನ್ ಯೂನಿಟ್‌ಗಳ ವಿದ್ಯುತ್ ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ.

ಆ) ಪ್ರತಿಯೊಂದು ಯೂನಿಟ್ಟಿನ ಉತ್ಪಾದನಾ ವೆಚ್ಚ ೮೭.೭೫ ಪೈಸಾಗಳು.

ಇ) ಈ ಸ್ಥಾವರಕ್ಕೆ ಕಲ್ಲಿದ್ದಲಿನ ಪೂರೈಕೆ ಸಿಂಗರೇ ಮತ್ತು ವೆಸ್ಟರ್ನ್ ಕೋಲ್ ಫೀಲ್ಡ್‌ನ ಗಣಿಗಳಿಂದ ತೃಪ್ತಿಕರವಾಗಿ ಸರಬರಾಜು ಆಗದಿದ್ದ ಕಾರಣ ವಿದ್ಯುತ್ ಉತ್ಪಾದನೆ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಕುಂಠಿತವಾಗಿತ್ತು.

ಈ) ಏಪ್ರಿಲ್ ತಿಂಗಳಿನಲ್ಲಿ ಸುಮಾರು ೩೫ ಮಿಲಿಯನ್ ಯೂನಿಟ್‌ಗಳು ಮತ್ತು ಮೇ ತಿಂಗಳುಗಳಲ್ಲಿ ಸುಮಾರು ೯೨ ಮಿಲಿಯನ್ ಯೂನಿಟ್‌ಗಳಷ್ಟು ವಿದ್ಯುತ್ತನ್ನು ಉತ್ಪಾದಿಸಲಾಗಲಿಲ್ಲ.

ಉ) ಕುಸಿತವನ್ನು ಭರಿಸಲು ರಾಜ್ಯ ಜಲ ವಿದ್ಯುತ್ ಸ್ಥಾವರಗಳಲ್ಲಿ ಉತ್ಪಾದನೆಯನ್ನು ಹೆಚ್ಚಿಸಲಾಯಿತು. ಇದರಿಂದ ಬಳಕೆದಾರರಿಗೆ ತೊಂದರೆಯಾಗಿಲ್ಲ.

ಶ್ರೀ ಜಿ. ರಾಜುಗೌಡ.—ಮಾನ್ಯ ಅಧ್ಯಕ್ಷರೇ, ಈ ರಾಯಚೂರು ಶಾಖೋತ್ಪನ್ನ ವಿದ್ಯುತ್ ಸ್ಥಾವರದಲ್ಲಿ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಸುಮಾರು ೧೨೮ ಮಿಲಿಯನ್ ಯೂನಿಟ್ ಕಡಿಮೆ ವಿದ್ಯುತ್ ಉತ್ಪಾದನೆಯಾಗಿರುವುದರಿಂದ ವಿದ್ಯುತ್ ನಿಗಮಕ್ಕೆ ಎಷ್ಟು ನಷ್ಟ ಆಗಿದೆ ಎಂದು ಕೇಳುತ್ತಿದ್ದೇನೆ. ಈ ವಿದ್ಯುತ್ ಉತ್ಪಾದನೆ ಕುಂಠಿತಗೊಂಡಿದ್ದರಿಂದ ಬಳಕೆದಾರರ ಮೇಲೆ ಯಾವ ರೀತಿಯ ದುಷ್ಪರಿಣಾಮ ಆಗಿಲ್ಲ ಎಂದು ಹೇಳಿದ್ದೀರಿ. ಯಾರ್ಯಾರಿಗೆ ಎಷ್ಟೆಷ್ಟು ಪ್ರಮಾಣದ ವಿದ್ಯುತ್ತನ್ನು ತಾವು ಸರಬರಾಜು ಮಾಡಿದ್ದೀರಿ ?

೧೦–೮೫ ಎ. ಎಂ.

ಎಷ್ಟು ಕೋಟಿ ರೂಪಾಯಿ ನಷ್ಟವಾಗಿದೆ ? ೧೨೮ ಮಿಲಿಯನ್ ಯೂನಿಟ್ ವಿದ್ಯುತ್ ಉತ್ಪಾದನೆ ನಷ್ಟವಾಗಿದೆ. ಅದರ ಪರ್ಯಾಯ ವ್ಯವಸ್ಥೆಯಾಗಿ ಯಾವ್ಯಾವ ಜಲ ವಿದ್ಯುತ್ ಘಟಕಗಳಿಂದ ಎಷ್ಟೆಷ್ಟು ಪ್ರಮಾಣದ ವಿದ್ಯುತ್ತನ್ನು ತಾವು ಪೂರೈಕೆ ಮಾಡಿದ್ದೀರಿ ?

ಶ್ರೀ ಎಸ್. ಎಂ. ಯಾಹ್ಯ.—ಮಾನ್ಯ ಅಧ್ಯಕ್ಷರೆ, ಎನರ್ಜಿ ಇನ್‌ಸ್ಟಾಲ್ ಕೆಪಾಸಿಟಿ ಯಾವುದು ಇದೆ, ಎನರ್ಜಿ ಜನರೇಷನ್ ಯಾವುದು ಮಾಡುತ್ತಿದ್ದೇವೆ ಅದು ಸ್ಥಿರವಾಗಿ ಇರುವುದಿಲ್ಲ, ಅರ್ಥಮೆಟಿಕ್ ಆಗಿ ಯಾವುದೂ ಹೋಗುತ್ತಿಲ್ಲ. ಥರ್ಮಲ್ ಪ್ಲಾಂಟ್‌ನಲ್ಲಿ ಮಾಡುವ ಜನರೇಷನ್ ಕೆಪಾಸಿಟಿ ಸ್ವಲ್ಪ ಹೆಚ್ಚು ಇರುತ್ತದೆ. ನಮಗೆ ಎಷ್ಟು ಬೇಕೋ ಅದಕ್ಕಿಂತ ಸ್ವಲ್ಪ ಹೆಚ್ಚಾದರೆ ನಮ್ಮ ಶರಾವತಿಯಲ್ಲಿ ಒಂದು ಯೂನಿಟ್ ಕಡಿಮೆ ಮಾಡುತ್ತೇವೆ. ಬಂದು ರೀತಿಯ ಒಳ್ಳೆಯ ಸ್ಕೀಮ್‌ಗಳನ್ನು ಹಾಕಿ ಮಾಡುತ್ತೇವೆ. ಪವರ್ ಎಲ್ಲಿಂದ ತೆಗೆದುಕೊಂಡು ಬಂದಿರಿ ಅಂದರೆ ಮಹಾರಾಷ್ಟ್ರದಿಂದ ಬೇಕಾದಷ್ಟು ಇಂಪೋರ್ಟ್ ಮಾಡುತ್ತಿದ್ದೇವೆ. ನಿನ್ನೆ ಮೊನ್ನೆ ಅದು ಪ್ರತಿ ದಿನ ಬದಲಾವಣೆಯಾಗುತ್ತದೆ. ಮೊನ್ನೆ ಮೂರು ಮಿಲಿಯನ್ ಯೂನಿಟ್ಸ್ ಬಂದಿದೆ. ಈ ರೀತಿ ಬೇರೆ ಬೇರೆ ಕಡೆಯಿಂದ ಬರುತ್ತಿದೆ, ಆ ಕಾರಣದಿಂದ ನಷ್ಟ ಎಷ್ಟೆಂದು ಹೇಳುವುದಕ್ಕಾಗುವುದಿಲ್ಲ. ಕೋಲ್ ಸಿಗದಿದ್ದ ಕಾರಣ ಐದಾರು ದಿವಸ ವಿದ್ಯುತ್ ಉತ್ಪಾದನೆಗೆ ತಡೆಹಾಕಲಾಯಿತು. ಮತ್ತೆ ನಷ್ಟ ಎಷ್ಟಾಯಿತು ಅಂದರೆ ಅದನ್ನು ಇತರ ಕಡೆಯಿಂದ ಒದಗಿಸಿಕೊಡಲಾಗಿದೆ.

ಶ್ರೀ ಜಿ. ರಾಜೂಗೌಡ.—ಒಂದೊಂದು ವಿದ್ಯುತ್ ಘಟಕದಿಂದ ಪ್ರತಿನಿತ್ಯ ೧೦ ಲಕ್ಷ ಯೂನಿಟ್ ಉತ್ಪಾದನೆಯಾಗುತ್ತಿತ್ತು. ಕಲ್ಲಿದ್ದಲಿನ ಸರಬರಾಜು ಕಡಿಮೆಯಾದ್ದರಿಂದ ೭.೫೮ ದಶ ಲಕ್ಷ ಯೂನಿಟ್ ಉತ್ಪಾದನೆ ಕಡಿಮೆಯಾಗಿದೆ. ಅಂದರೆ ಒಂದು ದಿನಕ್ಕೆ ಸುಮಾರು ೨ ಲಕ್ಷ ಯೂನಿಟ್ ಉತ್ಪಾದನೆ ಕಡಿಮೆಯಾಗಿದೆ. ಆದ್ದರಿಂದ ವಿದ್ಯುತ್ ನಿಗಮಕ್ಕೆ ಎಷ್ಟು ನಷ್ಟವಾಗಿದೆ ಎಂಬುದನ್ನು ಹೇಳಲಿವುದಕ್ಕೆ ಸಾಧ್ಯವಾಗುತ್ತದೆ. ಇಷ್ಟು ಕಡಿಮೆ ವಿದ್ಯುತ್ ಉತ್ಪಾದನೆಯಾಗಿರುವುದರಿಂದ ರೈತರ ಮೇಲೆ, ಬೆಳಕಿದಾರರ ಮೇಲೆ ದುಷ್ಪರಿಣಾಮ ಆಗಿದೆಯೇ ಎಂದು ಕೇಳಿದ್ದಕ್ಕೆ ಹಾವು ಇಲ್ಲ ಎಂದು ಹೇಳಿದಿರಿ. ಇಲ್ಲ ಅಂದ ಮೇಲೆ ಯಾವ ರೀತಿಯ ಪರ್ಯಾಯ ವ್ಯವಸ್ಥೆಯನ್ನು ಮಾಡಿದ್ದೀರಿ. ಎನ್ನುವುದನ್ನು ಹೇಳಬೇಕು. ಸಿಂಗ್ರೇಣಿ ಮತ್ತು ವೆಸ್ಟರ್ನ್ ಕೋಲ್ ಫೀಲ್ಡ್‌ನಿಂದ ಸರಬರಾಜಾಗತಕ್ಕಂಥ ಕಲ್ಲಿದ್ದಲಲ್ಲಿ ಮರಳು ಮತ್ತು ಮಣ್ಣು ಅಂಶ ಜಾಸ್ತಿಯಿರುವುದರಿಂದ ಶಾಖದ ಉತ್ಪಾದನೆ ಕಡಿಮೆಯಾಗಿ ವಿದ್ಯುತ್ ಉತ್ಪಾದನೆ ಕಡಿಮೆಯಾಗಿರುವುದು ನಿಜವೆ ? ನಾನೊಂದು ಸಲಹೆಯನ್ನು ಕೊಡುತ್ತಿದ್ದೇನೆ, ಹೊಸಪೇಟೆ ಹತ್ತಿರ ೨೧೦೦ ಮೆಗಾವಾಟ್ ವಿದ್ಯುತ್ ವಿದ್ಯುತ್ ಉತ್ಪಾದನೆಯ ಸ್ಥಾವರವನ್ನು ಸ್ಥಾಪಿಸಿ ಪುದ್ಯಾಸ್ ಮೂಲಕ ಕಲ್ಲಿದ್ದಲು ಸರಬರಾಜು ಮಾಡುವುದಕ್ಕೆ ಆಗುವುದಿಲ್ಲವೆ? ಈಗ ತಾವು ರವಾನೆ ಮಾಡತಕ್ಕ ವಿದ್ಯುತ್‌ನಲ್ಲಿ ಶೇಕಡ ಐರವ್ಟು ನಷ್ಟವಾಗುವುದನ್ನು ತಪ್ಪಿಸಿ ಬಳಕೆದಾರರಿಗೆ ಹೆಚ್ಚಿನ ಅನುಕೂಲ ಮಾಡುವುದಕ್ಕೆ ಆಗುವುದಿಲ್ಲವೆ ?

ಶ್ರೀ ಎಸ್. ಎಂ. ಯಾಹ್ಯ —ಹೊಸಪೇಟೆಯಿಂದ ಕಲ್ಲಿದ್ದಲನ್ನು ರಾಯಚೂರಿಗೆ ತರಬೇಕೋ ಅಥವ ಬೇರೆ ಕಡೆಯಿಂದ ತರಬೇಕು ಎಂದರೆ ಕೇಂದ್ರ ಸರ್ಕಾರದವರು ಯಾವ ರೀತಿ ಹೇಳುತ್ತಾರೆ ಆ ರೀತಿ ಮಾತ್ರ ಮಾಡಲಿಕ್ಕೆ ನಮಗೆ ಸಾಧ್ಯವೇ ಹೊರತು ನಾವೇ ಆಗಿ ಏನೂ ಮಾಡಲಿಕ್ಕೆ ಸಾಧ್ಯವಿಲ್ಲ.

(ಪ್ರಶ್ನೆ ಸಂಖ್ಯೆ ೧೯೪ (೬೨೩).—ಮಾನ್ಯ ಸದಸ್ಯರಾದ ಶ್ರೀ ಎಂ. ನಾರಾಯಣಸ್ವಾಮಿಯವರು ಗೈರು ಹಾಜರಾಗಿದ್ದಾರೆ.)

ದಕ್ಷಿಣ ಕನ್ನಡ ಜಿಲ್ಲೆಯ ಕುಡುಬಿ ಜನಾಂಗದವರ ಬಗ್ಗೆ.

೬೨೩. ಶ್ರೀ ರಮಾನಾಥ ರೈ (ಬಂಟವಾಳ).—ಮಾನ್ಯ ಸಮಾಜ ಕಲ್ಯಾಣ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕುಡುಬಿ ಜನಾಂಗದವರನ್ನು ಹರಿಜನ, ಗಿರಿಜನ ಪಟ್ಟಿಗೆ ಸೇರಿಸಿದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು ?

ಇ) ಈ ಪಂಗಡದವರನ್ನು ಹರಿಜನ ಗಿರಿಜನರ ಪಟ್ಟಿಗೆ ಸೇರಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ, ಗಣಿ ಮತ್ತು ಭೂ ವಿಜ್ಞಾನ ಸಚಿವರು).—

ಅ) ಹೌದು.

ಆ) ಯಾವುದೇ ಜಾತಿಯನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿ ಸೇರಿಸುವ ಅಧಿಕಾರ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತದೆ.

ಇ) ಪರಿಶೀಲಿಸಲಾಗುತ್ತಿದೆ.